# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1506** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **18-12-2025** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು.** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯು ಕಾರಾಗೃಹದ ಭದ್ರತೆಯ ವಿಚಾರದಲ್ಲಿ ಕೈಗೊಳ್ಳಬೇಕಾದ ಭದ್ರತಾ ಮಾನದಂಡಗಳೇನು; SOP ರಚನೆ ಮಾಡಲಾಗಿದೆಯೇ; ರಚನೆ ಮಾಡದಿದ್ದ ಪಕ್ಷದಲ್ಲಿ ಸಕಾರಣವನ್ನು ಸಲ್ಲಿಸುವುದು ; (ವಿವರ ನೀಡುವುದು) | ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯಲ್ಲಿನ ಕಾರಾಗೃಹಗಳ ಭದ್ರತಾ ವಿಷಯಗಳ ಕುರಿತಂತೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯಿಂದ ನಿಯೋಜಿಸಲ್ಪಡುವ ಅಧಿಕಾರಿ/ಸಿಬ್ಬಂದಿಗಳ ಕರ್ತವ್ಯ ನಿರ್ವಹಣೆಯ ಬಗ್ಗೆ ಈ ಕೆಳಕಂಡಂತೆ ಸುತ್ತೋಲೆ, ನಡವಳಿ, ಕರ್ನಾಟಕ ರಾಜ್ಯ ಪತ್ರಗಳ ಮೂಲಕ ಮಾನ ದಂಡಗಳನ್ನು ನಿಗಧಿಪಡಿಸಲಾಗಿದೆ.<br>1. ಸುತ್ತೋಲೆ ಸಂಖ್ಯೆ:ಇ4/ಸಿಆರ್-56/2013-14 ದಿನಾಂಕ:15-03-2022<br>2. ಸರ್ಕಾರದ ನಡವಳಿ ಸಂಖ್ಯೆ:ಹೆಚ್‌ಡಿ 37 ಪಿಆರ್‌ಎ 2022 ದಿನಾಂಕ:17-03-2022<br>3. ಸುತ್ತೋಲೆ ಸಂಖ್ಯೆ:ಇ4/ಸಿಆರ್-56/2013-14 ದಿನಾಂಕ:18-03-2022<br>4. ಕರ್ನಾಟಕ ರಾಜ್ಯ ಪತ್ರ ದಿನಾಂಕ:30-03-2022 |
| (ಆ) | ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳು ಒಳನುಸುಳಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಕೈಗೊಂಡ ಕ್ರಮಗಳೇನು ; | 1. ನಿಷೇಧಿತ ವಸ್ತುಗಳ ಕುರಿತು ದಿನಾಂಕ: 05.04.2022 ರಿಂದ ದಿನಾಂಕ: 08.12.2025ರವರೆಗಿನ ಅವಧಿಯಲ್ಲಿ ಕರ್ನಾಟಕ ಕಾರಾಗೃಹ (ತಿದ್ದುಪಡಿ) ಅಧಿನಿಯಮ 2022, ಕಲಂ-42ರ ಅಡಿಯಲ್ಲಿ ಒಟ್ಟು 294 ಪ್ರಕರಣಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ದಾಖಲಿಸಲಾಗಿರುತ್ತದೆ.<br><br>2. ಕಾರಾಗೃಹದ ಸಿಬ್ಬಂದಿಗಳು ಕಾರಾಗೃಹದೊಳಗೆ ನಿಷೇಧಿತ ವಸ್ತುಗಳನ್ನು ಸರಬರಾಜು ಮಾಡಲು ಯತ್ನಿಸಿದ ಒಟ್ಟು 21 ಪ್ರಕರಣಗಳಲ್ಲಿ ಕರ್ನಾಟಕ ಕಾರಾಗೃಹ (ತಿದ್ದುಪಡಿ)ಕಾಯ್ದೆ-2022ರ ಕಲಂ 42 ಮತ್ತು ಇತರೆ ಕಾಯ್ದೆಗಳಡಿಯಲ್ಲಿ ಸದರಿ ಸಿಬ್ಬಂದಿಗಳ ವಿರುದ್ಧ ಸಂಬಂಧಿಸಿದ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ ಮತ್ತು 1957ರ ಕೆ.ಸಿ.ಎಸ್(ಸಿಸಿ&ಎ) |

| | | |
|---|---|---|
| | | ನಿಯಮಗಳನ್ವಯ ಶಿಸ್ತುಕ್ರಮ ಜರುಗಿಸಲಾಗಿರುತ್ತದೆ. |
| (ಇ) | ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯು ಅಧಿಕಾರಿ/ಸಿಬ್ಬಂದಿಗಳ ಮೇಲೆ ಕೈಗೊಂಡ ಶಿಸ್ತು ಕ್ರಮಗಳೇನು ? (ವಿವರ ನೀಡುವುದು). | ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಅಧಿಕಾರಿ/ಸಿಬ್ಬಂದಿಗಳ ಕರ್ತವ್ಯಲೋಪವೆಸಗಿದ್ದಲ್ಲಿ ಅಂತಹವರ ಮೇಲೆ ಶಿಸ್ತುಕ್ರಮಗಳ ಕುರಿತಂತೆ ಶಿಸ್ತು ಪ್ರಾಧಿಕಾರ ಮತ್ತು ಸಕ್ಷಮ ಪ್ರಾಧಿಕಾರವಾದ ಪೊಲೀಸ್ ಮಹಾನಿರ್ದೇಶಕರು, ಆಂತರಿಕ ಭದ್ರತಾ ವಿಭಾಗ ರವರು ಸಕ್ಷಮ ಪ್ರಾಧಿಕಾರಿಗಳಾಗಿದ್ದು, ಸದರಿಯರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಲಾಗುವುದು. ಪ್ರಸ್ತುತ ಅವರ ಮೇಲೆ ಯಾವುದೇ ಕರ್ತವ್ಯ ಲೋಪಗಳ ಶಿಫಾರಸ್ಸು ಆಗಿರುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 386 ಪಿಆರ್‌ಎ 2025**

**( ಡಾ: ಜಿ.ಪರಮೇಶ್ವರ )**
ಗೃಹ ಸಚಿವರು.